ಈ) ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಅಂತರ್ಜಲ ಸಮೀಕ್ಷೆ ವಿಭಾಗ ಇಸ್ರೋ ಹಾಗೂ ದೂರ ಸಂವೇದನಾ ಸಂಸ್ಥೆ ಸಹಯೋಗದೊಂದಿಗೆ ಮಧ್ಯಮಗತಿಯ ಭೂಉಪಗ್ರಹದ ನಕಾಶೆಗಳನ್ನು ಬಳಸಿ ರಾಜ್ಯದ ವಿವಿಧ ಭಾಗಗಳಲ್ಲಿ ಸಮೀಕ್ಷೆಯನ್ನು ನಡೆಸಿದೆ.

ಉ) ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಂತರ್ಜಲ ಸಮೀಕ್ಷಾ ವಿಭಾಗವು ಈಗಾಗಲೇ ಬೆಂಗಳೂರು ಜಿಲ್ಲೆಯ ಹೊಸಕೋಟೆ ಮತ್ತು ದೇವನಹಳ್ಳಿ ತಾಲ್ಲೂಕು ಹಾಗೂ ಕೋಲಾರ ಜಿಲ್ಲೆಯ ಮುಳಬಾಗಿಲು ಮತ್ತು ಗೌರಿಬಿದನೂರು ತಾಲ್ಲೂಕುಗಳಲ್ಲಿ ಕಿರು ಜಲಾನಯನ ಪ್ರದೇಶ ಸಮೀಕೆಗಳನ್ನು ತೆಗೆದುಕೊಳ್ಳಲಾಗಿದೆ. ಇದೇ ರೀತಿ ರಾಜ್ಯದ ಇತರ ಕ್ಲಿಷ್ಟಕರ (ಕ್ರಿಟಿಕಲ್ ಬ್ಲಾಕ್ಸ್) ಪ್ರದೇಶಗಳಲ್ಲಿ ಸಮೀಕ್ಷೆಯನ್ನು ಕೈಗೊಳ್ಳುವ ಯೋಜನೆ ಇದೆ. ಒಮ್ಮೆ ಈ ಸಮೀಕ್ಷೆ ಮುಗಿದ ನಂತರ ಕ್ಲಿಷ್ಟಕರ ಪ್ರದೇಶಗಳಲ್ಲಿ ಒದಗಿಬರುವ ಮಾಹಿತಿ ಆಸ್ಪದ ಘೋಷಿತ ಪ್ರದೇಶಗಳನ್ನು ವರ್ಗೀಕರಿಸಲು ನಬಾರ್ಡ್ ಸಂಸ್ಥೆಗೆ ಪೂರ್ಣ ವರದಿಯನ್ನು ಪುನರ್ ಪರಿಶೀಲನೆಗಾಗಿ ಕಳುಹಿಸಿಕೊಡಲಾಗುವುದು. ಅಲ್ಲಿಯವರೆಗೆ ಈಗ ಹಾಲಿ ಇರುವ ನೀತಿಯನ್ನು ಅನುಸರಿಸಲಾಗುವುದು.

ವಿದ್ಯುತ್ ದರ ಏರಿಕೆಯ ಬಗ್ಗೆ

೧೦೮ (೩೧೧) ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

೧. ವಿದ್ಯುತ್ ದರ ಏರಿಕೆಯಿಂದ ಕೆಲವು ಉದ್ಯಮಗಳಿಗೆ ವಿಶೇಷವಾಗಿ ಜವಳಿ ಉದ್ಯಮ ಹಾಗೂ ಇಂಜಿನೀಯರಿಗ್ ಉತ್ಪಾದನಾ ವಸ್ತುಗಳ ಉದ್ಯಮಕ್ಕೆ ತೊಂದರೆ ಉಂಟಾಗಿರುವುದು ನಿಜವೇ ?

೨. ಹಾಗಿದ್ದಲ್ಲಿ ಎಷ್ಟು ಉದ್ಯಮಗಳು ವಿದ್ಯುತ್ ದರ ಏರಿಕೆಯಿಂದ ರೋಗಗ್ರಸ್ತವಾಗಿವೆ ಹಾಗೂ ರೋಗಗ್ರಸ್ತವಾಗುವುದರಲ್ಲಿವೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್‌ಚ್ಛಕ್ತಿ ಮಂತ್ರಿಗಳು).—

೧. ವಿದ್ಯುತ್ ದರ ಏರಿಕೆಯಿಂದ ಸಾಮಾನ್ಯವಾಗಿ ಎಲ್ಲಾ ಕೈಗಾರಿಕೆಗಳಿಗೂ ತೊಂದರೆಯಾಗಿಲ್ಲ.

೨. ಈವರೆಗೆ ಅಂತಹ ಯಾವುದೇ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲ.

ರಾಜ್ಯದಲ್ಲಿ 'ಸಿ' ಮತ್ತು 'ಡಿ' ವರ್ಗದ ಜಮೀನಿನ ಲಭ್ಯತೆ ಬಗ್ಗೆ

೧೧೧ (ಳಳ) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದ ಜಿಲ್ಲೆಗಳಲ್ಲಿರತಕ್ಕ ಸಿ ಮತ್ತು ಡಿ ವರ್ಗದ ಜಮೀನಿನ ವಿಸ್ತೀರ್ಣ (ಜಿಲ್ಲಾವಾರು)

ಆ) ಇಲಾಖೆಯ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಸಿ ಮತ್ತು ಡಿ ವರ್ಗದ ಜಮೀನಿನ ಎಷ್ಟು ವಿಸ್ತೀರ್ಣದಲ್ಲಿ ಸಸಿಗಳನ್ನು ನೆಡಬಹುದು?

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಸಚಿವರು).—

ಅ) ಜಿಲ್ಲಾವಾರು ಸಿ ಮತ್ತು ಡಿ ವರ್ಗದ ಜಮೀನಿನ ವಿಸ್ತೀರ್ಣದ ವಿವರಣಾ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ೧೯೮೬-೮೭ನೇ ಇಸವಿಯವರೆಗೆ ಕರ್ನಾಟಕ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ೭೫೨೭ ಹೆಕ್ಟೇರ್ ಪ್ರದೇಶದಲ್ಲಿ ಗಿಡಗಳನ್ನು ನೆಡಲಾಗಿದೆ.

ಜಮೀನನ್ನು ೧೯೮೬-೮೭ರವರೆಗೆ ಸರ್ವೆ ಮಾಡಿ ಅರಣ್ಯ ಇಲಾಖೆಯ ವಶಕ್ಕೆ ಸ್ಥಳದಲ್ಲಿ ಯಾವ ರೀತಿ ಇದೆಯೋ ಹಾಗೆಯೇ ತೆಗೆದುಕೊಂಡಿರುವ ಬಗ್ಗೆ ವಿವರಣಾ ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸಿ ಮತ್ತು ಡಿ ವರ್ಗದ ಜಮೀನು ಲಭ್ಯವಿರುವುದು		ಅರಣ್ಯ ಇಲಾಖೆಗೆ ವರ್ಗಾಯಿಸಿದ ಮತ್ತು ಪಡೆದ ವಿಸ್ತೀರ್ಣದ ಬಗ್ಗೆ		ಒಟ್ಟು ವಿಸ್ತೀರ್ಣ
		ಸಿ ವರ್ಗ	ಡಿ ವರ್ಗ	ಸಿ ವರ್ಗ	ಡಿ ವರ್ಗ	
1	2	3	4	5	6	7
1)	ಬೆಂಗಳೂರು	15702	30046	2762	7833	10595
2)	ಬೆಳಗಾಂ	870	4016	1044	229	1273
3)	ಬಿಜಾಪುರ	75	1591	20	162	182
4)	ಬೀದರ್	36077	12018	21007	8226	29233
5)	ಬಳ್ಳಾರಿ	40122	37739	10787	20202	30989
6)	ಚಿಕ್ಕಮಗಳೂರು	31558	14742	22694	10086	32780
7)	ದಕ್ಷಿಣ ಕನ್ನಡ	77230	7397	73762	12702	86464
8)	ಚಿತ್ರದುರ್ಗ	41034	36444	40389	31916	72305
9)	ಧಾರವಾಡ	2626	5413	3617	4995	8612
10)	ಗುಲ್ಬರ್ಗ	44694	40716	62390	31290	93680
11)	ಹಾಸನ	27961	13808	19533	13464	32997
12)	ಕೋಲಾರ	32787	55156	21913	24135	46048
13)	ಕೊಡಗು	37310	647	15825	1437	17262
14)	ಮೈಸೂರು	20127	5575	8689	2960	11649
15)	ಮಂಡ್ಯ	26605	17518	29009	17651	46660
16)	ರಾಯಚೂರು	31759	18378	57068	50360	107428
17)	ಶಿವಮೊಗ್ಗ	65961	5821	74674	5524	80198
18)	ತುಮಕೂರು	23611	4568	28255	23665	51920
19)	ಉತ್ತರ ಕನ್ನಡ	3017	739	221	16	237
	ಒಟ್ಟು	559146	312330	493659	266853	760512

ಸಿ ಮತ್ತು ಡಿ ವರ್ಗದ ಜಮೀನಿನಲ್ಲಿ ನೆಡುತೋಪು ಬೆಳಸಿರುವ ಜಿಲ್ಲಾವಾರು ವಿವರ (ವಿಸ್ತೀರ್ಣ ಹೆಕ್ಟೇರ್‌ನಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	1983–84ನೇ ಸಾಲಿನಲ್ಲಿ	1984–85ನೇ ಸಾಲಿನಲ್ಲಿ	1985–86ನೇ ಸಾಲಿನಲ್ಲಿ	1986–87ನೇ ಸಾಲಿನಲ್ಲಿ
1	2	3	4	5	6
1)	ಬೆಂಗಳೂರು	—	—	90.00	100.00
2)	ಕೋಲಾರ	—	10.00	90.00	85.00
3)	ಹಾಸನ	268.50	181.00	130.00	113.00
4)	ತುಮಕೂರು	100.00	—	—	—
5)	ಮೈಸೂರು	75.00	—	87.00	154.00
6)	ಮಂಡ್ಯ	—	—	—	—
7)	ದಕ್ಷಿಣ ಕನ್ನಡ	80.00	—	—	—
8)	ಕೊಡಗು	—	—	—	4.00
9)	ಬೆಳಗಾಂ	200.00	494.10	288.00	214.00
10)	ಧಾರವಾಡ	—	36.00	158.00	93.00
11)	ಬಿಜಾಪುರ	176.00	212.00	313.00	230.00
12)	ಗುಲ್ಬರ್ಗಾ	50.00	—	140.00	196.20
13)	ಬೀದರ್	255.20	320.00	252.00	150.00
14)	ರಾಯಚೂರು	150.00	104.00	213.00	298.00
15)	ಬಳ್ಳಾರಿ	—	—	—	180.00
16)	ಚಿತ್ರದುರ್ಗ	100.00	310.00	197.00	185.00
17)	ಶಿವಮೊಗ್ಗ	—	48.00	80.00	20.00
18)	ಉತ್ತರ ಕನ್ನಡ	—	—	43.00	105.00
19)	ಚಿಕ್ಕಮಗಳೂರು	65.00	12.50	70.00	—
	ಒಟ್ಟು ವಿಸ್ತೀರ್ಣ	1519.70	1727.60	2151.00	2127.70

ಅಧ್ಯಕ್ಷರು.—ಪ್ರಶ್ನೋತ್ತರಗಳನ್ನು ಮುಂದಿಸಲಾಯಿತು.